ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ1(2).ಸ್ಥಾನಪನ್ನ ಬಡ್ತಿ-16/2013-14 ದಿನಾಂಕ:29-11-2014

ಅಧಿಕೃತ ಜ್ಞಾಪನ

ವಿಷಯ:-ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಗ್ರೇಡ್-2 ಸಹ ಶಿಕ್ಷಕರಿಗೆ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರ ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 51 ಡಿಜಿಓ 2005 ದಿನಾಂಕ: 30-10-2006
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 12 ಎಸ್‌ಡಿಇ 2007 ದಿನಾಂಕ: 29-01-2008.
3. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 250 ಡಿಪಿಐ 2006 ದಿನಾಂಕ: 22-02-2008.
4. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಿ1(2) ಸ್ಥಾ.ಪ.ಬಡ್ತಿ-16/2013-14 ದಿನಾಂಕ:12-05-2014
5. ದಿನಾಂಕ: 20-10-2014 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿ
6. ದಿನಾಂಕ:11-11-2014 ಮತ್ತು 24-11-2014 ರಂದು ನಡೆಸಿದ ಸ್ಥಳ ಆಯ್ಕೆ ಪ್ರಕ್ರಿಯೆ.

-&&&-

ಪ್ರಸ್ತಾವನೆ

ಉಲ್ಲೇಖ-1, 2, ಮತ್ತು 3ರ ಅಧಿಸೂಚನೆ ಮತ್ತು ಸರ್ಕಾರದ ಸುತ್ತೋಲೆಗಳನ್ವಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ನೇಮಕಾತಿ ಪ್ರಾಧಿಕಾರವೆಂದು ನಿಗಧಿಪಡಿಸಿ ಆದೇಶ ಹೊರಡಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 464 ಡಿಜಿಓ 2008 ದಿನಾಂಕ 06-01-2009ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ ವೃಂದದ ಹುದ್ದೆಗಳಿಗೆ ಬಡ್ತಿ ನೀಡುವ ಸಲುವಾಗಿ ಇಲಾಖಾ ಮುಂಬಡ್ತಿ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಬಡ್ತಿಗೆ ಲಭ್ಯವಿರುವ ಒಟ್ಟು 172 ಹುದ್ದೆಗಳಿಗೆ ಅರ್ಹ ಸರ್ಕಾರಿ ಪ್ರೌಢಶಾಲಾ ಗ್ರೇಡ್-2 ವೃಂದದ ಸಹಶಿಕ್ಷಕರುಗಳಿಗೆ ಸ್ಥಾನಪನ್ನ ಬಡ್ತಿ ನೀಡಲು ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಈ ಸಂಬಂಧ ಬೆಂಗಳೂರು ಮತ್ತು ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳಿಂದ ಹಾಗೂ ಇತರೆ ಅಧೀನ ಕಛೇರಿ ಮುಖ್ಯಸ್ಥರಿಂದ ಸ್ವೀಕರಿಸಿದ್ದ ಒಟ್ಟು 205 ಬಡ್ತಿ ಪ್ರಸ್ತಾವನೆಗಳನ್ನು ದಿನಾಂಕ:20-10-2014 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ಪರಿಶೀಲನೆಗಾಗಿ ಮಂಡಿಸಲಾಯಿತು. ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ಸಹ ಶಿಕ್ಷಕರ ಜೇಷ್ಠತೆ ಹಾಗೂ ಮೀಸಲಾತಿ ಅನ್ವಯ ಬಡ್ತಿ ಪ್ರಸ್ತಾವನೆಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿದೆ.

- ಇಲಾಖಾ ಮುಯುಂಬಡ್ತಿ ಸಮಿತಿಯ ಸಭೆಯಲ್ಲಿ ಅರ್ಹರೆಂದು ಪರಿಗಣಿಸಿರುವ 205 ಶಿಕ್ಷಕರುಗಳ ಪೈಕಿ ಈಗಾಗಲೇ ಕೆ.ಸಿ.ಎಸ್.ಆರ್. ನಿಯಮ-32ರಡಿ ಮುಖ್ಯ ಶಿಕ್ಷಕರ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಶಿಕ್ಷಕರುಗಳನ್ನೂ ಒಳಗೊಂಡಂತೆ 172 ಸಹಶಿಕ್ಷಕರುಗಳನ್ನು ಮೊದಲ

ಹಂತದಲ್ಲಿ ದಿನಾಂಕ:11-11-2014 ರಂದು ಸ್ಥಳ ಆಯ್ಕೆ ಪ್ರಕ್ರಿಯೆಗೆ ಆಹ್ವಾನಿಸಲಾಯಿತು. ಸದರಿ ದಿನದಂದು ಹಾಜರಾದ ಶಿಕ್ಷಕರುಗಳ ಪೈಕಿ 141 ಮಂದಿ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ. ಉಳಿದ ಮುಖ್ಯ ಶಿಕ್ಷಕರ ಹುದ್ದೆಗಳನ್ನು ತುಂಬುವ ಸಲುವಾಗಿ ಇಲಾಖಾ ಮುಂಬಡ್ತಿ ಸಮಿತಿ ಸಭೆ [ಡಿ.ಪಿ.ಸಿ] ಯಲ್ಲಿ ಆಗಿ ಉಳಿದ ಸಹಶಿಕ್ಷಕರುಗಳನ್ನು ದಿನಾಂಕ:24-11-2014 ರಂದು ಸ್ಥಳ ಆಯ್ಕೆ ಪ್ರಕ್ರಿಯೆಗೆ ಆಹ್ವಾನಿಸಲಾಯಿತು. ಸದರಿ ದಿನದಂದು ಹಾಜರಾದ ಶಿಕ್ಷಕರ ಪೈಕಿ 26 ಮಂದಿ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ.

- ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಒಟ್ಟು 167 ಮಂದಿ ಅರ್ಹ ಪ್ರೌಢಶಾಲಾ ಗ್ರೇಡ್-2 ಸಹ ಶಿಕ್ಷಕರುಗಳಿಗೆ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಹುದ್ದೆಗೆ ಸ್ಥಾನಪನ್ನ ಬಡ್ತಿಯನ್ನು ನೀಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಂಡ ಸರ್ಕಾರಿ ಪ್ರೌಢಶಾಲಾ ಗ್ರೇಡ್-2 ಸಹ ಶಿಕ್ಷಕರುಗಳಿಗೆ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಷರತ್ತುಗಳೊಂದಿಗೆ ಜ್ಯೇಷ್ಠತೆ ಮತ್ತು ಮೀಸಲಾತಿ ನಿಯಮಗಳ ಪ್ರಕಾರ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಹಾಗು ತತ್ಸಮಾನ ವೃಂದದ ಗ್ರೂಪ್.ಬಿ ಹುದ್ದೆಗಳ ವೇತನ ಶ್ರೇಣಿ ರೂ.22800-600-24600-700-28800-800-33600-900-39000-1050-43200ರಲ್ಲಿ ಸ್ಥಾನಪನ್ನ ಬಡ್ತಿ ನೀಡಿ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಶಿಕ್ಷಕರು ಸ್ವತ: ಸ್ಥಳ ಆಯ್ಕೆ ಮಾಡಿ ಕೊಂಡಿರುವಂತೆ ಅವರ ಹೆಸರಿನ ಮುಂದೆ ಸೂಚಿಸಿದ ಶಾಲಾ / ಕಾಲೇಜು / ಕಛೇರಿಗಳಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ | ಜೇಷ್ಠತಾ ಸಂಖ್ಯೆ | ಗ್ರೇಡ್-2 ಸಹಶಿಕ್ಷಕರ ಹೆಸರು (ಸೇವಾ ಪುಸ್ತಕದಲ್ಲಿರುವಂತೆ) ಶಾಲಾ/ಕಾಲೇಜು/ಕಛೇರಿಯ ವಿಳಾಸ | ಮುಖ್ಯ ಶಿಕ್ಷಕ/ತತ್ಸಮಾನ ವೃಂದದ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಶಾಲಾ/ಕಾಲೇಜು/ಕಛೇರಿಯ ವಿಳಾಸ |
|---|---|---|---|
| 1 | 2 | 3 | 4 |
| 1. | 1010 | ಬಿ ಎಸ್ ಸಿದ್ದೇಗೌಡ, ಮುಖ್ಯ ಶಿಕ್ಷಕರು [ನಿ.32] ಸರ್ಕಾರಿ ಪ್ರೌಢಶಾಲೆ, ಸಾತನೂರು ಮಂಡ್ಯ ತಾಲ್ಲೂಕು & ಜಿಲ್ಲೆ | ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಸಾತನೂರು ಮಂಡ್ಯ ತಾಲ್ಲೂಕು & ಜಿಲ್ಲೆ |
| 2. | 1190ಎ | ವಿ ಬಂಗಾರು ಸಹಶಿಕ್ಷಕರು, ದೊಡ್ಡಪಾಳ್ಯ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ | ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ವಾಟಾಳ್, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ |
| 3. | 1172 | ಬಿ ವಿ ಗುರುಪ್ರಕಾಶ್ ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಚಿತ್ರದುರ್ಗ | ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಸ್ಕಲ್, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ |
| 4. | 1422 | ಆರ್ ಶಿವಮೂರ್ತಿ ತಾಂತ್ರಿಕ ಸಹಾಯಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು | ಮುಖ್ಯ ಶಿಕ್ಷರು, ಸರ್ಕಾರಿ ಪ್ರೌಢಶಾಲೆ, ಇಂಡ್ಲವಾಡಿ, ಆನೇಕಲ್ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ |
| 5. | 1510 | ಹೆಚ್ ಟಿ ಜಾನಕಿ ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಹೊಸಹೊಳಲು ಕೆ.ಆರ್.ಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆ | ಮುಖ್ಯ ಶಿಕ್ಷರು, ಸರ್ಕಾರಿ ಪ್ರೌಢಶಾಲೆ, ಸಾರಂಗಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ |